ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Wednesday, the 28th August 1974/Bhadrapada 7, 1896 S. E.

The House met in the Assembly Chamber, Vidhana Soudha, at Thirty Minutes past Eight of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral answers were given)

Vacant Posts of Lady Doctors in Chikkamagalur District

68. **Sri G. PUTTASWAMY** (Mudigere).—

Will the Minister for Health be pleased to state :—

(*a*) the hospitals in Chikkamaglur District where the Lady Doctors are not posted and since when ;

(*b*) the reasons for not posting the Lady Doctors on permanent basis even though the matter was brought to the notice of the Government by the Member, Legislative Assembly, Mudigere Constituency about the inconvenience caused to the Public ;

(*c*) within what period the Lady Doctors would be posted to the hospitals where there are no such Doctors ?

Sri H. SIDDAVEERAPPA (Minister for Health).—

(*a*) (i) Maternity Hospital, Chikkamagalur. Since November 1973.

(ii) Hirenellur P. H. C.

Dr. M. N. Sulochana has been transferred to this hospital on 8-6-1974.

(iii) Nidagatta P. H. C. since April, 1974.

(iv) Balehonnur C. D. Since April, 1974

(v) Narasimhapur C. D. Since May, 1974.

(vi) Ajjampura P. H. C. since one year.

(SRI H. SIDDAVEERAPPA)

(vii) Mallandru P. H. C. since 2-1-1973

(vii) Mudigere General Hospital, since May, 1974.

(b) The Government have appointed 270 Lady Doctors on 25-7-1974 from the list of Doctors selected by Public Service Commission.

The Director of Health Services has been directed to post them to vacant posts.

(c) The Government have appointed 270 Lady Doctors on 25-7-1974 from the List of Doctors selected by Public Service Commission.

The Director of Health Services has been directed to post them to vacant posts.

ಶ್ರೀ ಜಿ. ಪುಟ್ಟಸ್ವಾಮಿ.—ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿರುವ ಪ್ರಕಾರ ಕಳಸ ಗ್ರಾಮದ ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯರುಗಳು ನುಮಾರು ಒಂದೂವರೆ ವರ್ಷಗಳಿಂದಲೂ ಇಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಎಚ್. ಸಿದ್ದವೀರಪ್ಪ.—ಬಾರೇ ಹೊನ್ನೂರದಲ್ಲಿ ಏಪ್ರಿಲ್ 1974 ರಿಂದ ಮಹಿಳಾ ವೈದ್ಯರು ಇಲ್ಲ. ಮರೆನಾಡಿನ ಅನೇಕ ಆಸ್ಪತ್ರೆಗಳಲ್ಲಿ ಬಹಳ ವರ್ಷಗಳಿಂದಲೂ ರೇಡಿ ಡಾಕ್ಟರ್ಸ್ ಇಲ್ಲ. ಇದುವರೆಗೂ ಅನೇಕ ಕಡೆಗಳಿಂದ ರೇಡಿ ಡಾಕ್ಟರ್ಸ್ ಇಲ್ಲವೆಂಬ ದೂರು ಬಂದಿರುವುದರಿಂದ ಈಗ ಎಷ್ಟು ಖಾಲಿ ಜಾಗಗಳು ಇವೆಯೋ ಅಲ್ಲೆಲ್ಲಾ ಅವರನ್ನು ನೇಮಕ ಮಾಡಿದ್ದೇವೆ. ಆದರೆ ಅಷ್ಟು ಜನರೂ ಸಹ ಬೆಂಗಳೂರಿನಲ್ಲಿಯೇ ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ. ಯಾರೂ ತೂಡ ಹೊರಗೆ ಹೋಗುವುದಕ್ಕೆ ಇಷ್ಟಪಡುತ್ತಿಲ್ಲ. ಅವರಿಗೆ ಒಂದು ವೇಳೆ ಟ್ರೈಂ ಸಾಕಷ್ಟು ಕೊಟ್ಟೂ ಪೋಸ್ಟಿಂಗ್ ಆಗಿರುವವರು ಅಲ್ಲಿಗೆ ಹೋಗಲೇಬೇಕೆಂದು ಕಡ್ಡಾಯ ಮಾಡಿದರೂ ಯಾರೂ ಮರೆನಾಡಿಗೆ ಹೋಗುತ್ತಿಲ್ಲ. ಬೇಕಾದಷ್ಟು ಅದರ ಬಗ್ಗೆ ದೂರುಗಳು ಬರುತ್ತಲೇ ಇರುತ್ತವೆ. ಕೆಲವರು ಅನ್‌ಮ್ಯಾರಿಡ್ ಗರ್ಲ್ಸ್ ಎಂದು ಹೇಳಿ ಅವರನ್ನು ಮದುವೆ ಮಾಡಿಕೊಟ್ಟ ಮೇಲೆ ಬೇಕಾದರೆ ಹೊರಗೆ ಕಳುಹಿಸುತ್ತೇವೆಂದು ಹೇಳುತ್ತಾರೆ, ಆದ್ದರಿಂದ ಅನೇಕರು ಅಲ್ಲಿಗೆ ಹೋಗುತ್ತಾ ಇಲ್ಲ ಆದರೂ ಈಗ ಅಂತಹವರನ್ನೇ ಹೋಗಲೇಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಎಲ್ಲೆಲ್ಲಿ ಬಹಳ ದಿವಸಗಳಿಂದ ಮಹಿಳಾ ವೈದ್ಯರು ಇಲ್ಲವೋ ಅಂತಹ ಕಡೆಗಳಲ್ಲಿ ಈಗ ಹಾಕುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಆ ರೀತಿ ಹೋಗದಿದ್ದರೆ, ಅಂತಹವರನ್ನು ಡಿಸ್‌ಮಿಸ್ ಮಾಡಿ Various complaints are made. No body so far has gone without grudging. It is hoped they will go and take charge.

ಶ್ರೀ ಜಿ. ಪುಟ್ಟಸ್ವಾಮಿ.—ನೀವು ಒಬ್ಬ ಮಹಿಳಾ ವೈದ್ಯರನ್ನು ಪೋಸ್ಟ್ ಮಾಡಿ ಅವರು ಆ ಜಾಗಕ್ಕೆ ಬಂದನಂತರ ಅಲ್ಲಿ ಮೊದಲು ಇದ್ದ ಮಹಿಳಾ ವೈದ್ಯರನ್ನು ವರ್ಗ ಮಾಡಬೇಕು. ಒಂದು ವೇಳೆ ಅವರು ಬರದಿದ್ದರೆ ಆ ಜಾಗಕ್ಕೆ ಬೇರೆ ಒಬ್ಬರು ಬರುವವರೆಗೂ ಅಲ್ಲಿದ್ದವರನ್ನು ರಿಲೀವ್ ಮಾಡಬಾರದೆಂಬುದಾಗಿ ಏನೆ ನಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡಬಾರದು ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಮಾಡಿದರೆ ರಜ ಹಾಕ ಕೂತುಕೊಳ್ಳುತ್ತಾರೆ. ಆಗ ರಜ ಕೊಡುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕೂ ಆಗುವುದಿಲ್ಲ. We can even refuse leave but there are so many other difficulties so far as these lady doctors are concerned. ಇನ್ನೂ ಏನೇನೋ ಮಾಹಿತಿಯ ಬಗ್ಗೆ ಕನ್‌ಸಿದರೇಷನ್ಸ್ ಬರುತ್ತವೆ. ಅನೇಕ ಗ್ರೌಂಡ್ಸ್ ಇರುತ್ತವೆ. ಯಾರನ್ನೇ ಆಗಲಿ ಅಲ್ಲಿಗೆ ಹಾಕುತ್ತೇವೆಂದರೆ ಅಲ್ಲಿಗೆ

† Indicates that the remarks or speeches have not been revised by the member concerned.

ಹೋಗುವುದೇ ಇಲ್ಲ. ಆದ್ದರಿಂದ ಒಂದು ವೇಳೆ ಯಾರಾದರೂ ಲೇಡಿ ಡಾಕ್ಟರ್ಸ್ ಅಂತಹ ಸ್ಥಳಗಳಿಗೆ ಹೋದರೆ ಅವರನ್ನು ಸರಿಯಾದ ರೀತಿಯಲ್ಲಿ ನೋಡಿ ಅವರನ್ನು ಅಲ್ಲಿಯೇ ಇಟ್ಟುಕೊಂಡು ಅವರಿಂದ ಹೆಚ್ಚಿಗೆ ಸೇವೆ ಮಾಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಅವರಿಗೆ ಹೆಚ್ಚಿನ ಅನುಕೂಲಗಳು ಅಲ್ಲಿದ್ದರೆ ಆ ಸ್ಥಳದಿಂದ ಅವರು ನಿಜವಾಗಿಯೂ ಬಿಟ್ಟುಹೋಗುವುದಿಲ್ಲ. ಅವರಿಗೆ ಬಹುಮುಖ್ಯವಾಗಿ ಅನುಕೂಲತೆಗಳು ಚೆನ್ನಾಗಿರಬೇಕು. ಆಗ ಖಂಡಿತವಾಗಿ ಯಾರೇ ಆಗಲೀ ಹೋಗುತ್ತಾರೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಇತ್ತೀಚೆಗೆ ಹೊಸದಾಗಿ ಅನೇಕ ಕಡೆಗಳಲ್ಲಿ ಮಹಿಳಾ ವೈದ್ಯರನ್ನು ನೇಮಕ ಮಾಡುತಿದ್ದೀರಿ. ಅವರನ್ನು ಗೊತ್ತಾದಂಥ ಸ್ಥಳಕ್ಕೆ ವರ್ಗ ಮಾಡಲಾಗಿರುವ ಪಟ್ಟಿಯನ್ನು ಯಾವುದೇ ಸಂದರ್ಭದಲ್ಲಾಗಲೀ ಸರ್ಕಾರದವರು ಬದಲಾವಣೆ ಮಾಡುವುದಿಲ್ಲವೆಂದೇ ಕೊಡಲೇ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಏಕೆಂದರೆ ಅವರು ಎಲೆಕ್ಷನ್ ಕ್ಯಾನ್ವಾಸಿಂಗ್‌ಗೆ ಬರುತ್ತಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಅದೇ ಕಷ್ಟ ಬರುವುದು. ಒಂದೊಂದು ಸಾರಿ ಇಂಟರ್‌ಫಿಯರ್ ಮಾಡಬೇಕಾಗಿ ಬರುತ್ತದೆ. ಅದು ಬಹಳ ಅಪರೂಪವಾಗಿ ಬರುತ್ತದೆ.

ಶ್ರೀ ಕೆ.ಎನ್. ರುದ್ರಪ್ಪ. ಮಹಿಳಾ ಡಾಕ್ಟರುಗಳಿಗೆ ಅವರು ಹೋದ ಕಡೆಗಳಲ್ಲಿ ಕ್ವಾರ್ಟರ್ಸ್ ಇಲ್ಲದೇ ಇರುವುದರಿಂದ, ಅನೇಕರು ಅಲ್ಲಿಗೆ ಹೋಗುತ್ತಾ ಇಲ್ಲ. ಆದ್ದರಿಂದ ಅವರಿಗೆ ಕೊಡಲೇ ಅಲ್ಲಿ ಕ್ವಾರ್ಟರ್ಸ್‌ನ್ನು ಕಟ್ಟಿಸಿಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.— ಕೆಲವು ಕಡೆಗಳಲ್ಲಿ ಆ ರೀತಿಯಾದ ತೊಂದರೆ ಇದೆ. ಕ್ವಾರ್ಟರ್ಸ್ ಇದ್ದರೂ ಕೆಲವು ಕಡೆಗಳಲ್ಲಿ ಹೋಗುವುದಕ್ಕೆ ಅವರು ಇಷ್ಟ ಪಡುತ್ತಾ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಅನೇಕ ಕಡೆಗಳಲ್ಲಿ ಕ್ವಾರ್ಟರ್ಸ್ ಇದ್ದರೆ, ನೀರೇ ಇರುವುದಿಲ್ಲ. ನೀರಿದ್ದರೆ ಕ್ವಾರ್ಟರ್ಸ್ ಇರುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಕೆಲವು ಕಡೆಗಳಲ್ಲಿ ಮಾತ್ರ ಆ ರೀತಿಯಾಗಿ ತೊಂದರೆ ಇರಬಹುದು. ಎಲ್ಲಾ ಕಡೆಗಳಲ್ಲಿ ಆ ರೀತಿಯಾಗಿರುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಹೊಸದಾಗಿ ಪಿ. ಎಸ್. ಸಿ. ಯಿಂದ ಈಗ ಅನೇಕ ಮಹಿಳಾ ವೈದ್ಯರನ್ನು ನೇಮಕ ಮಾಡಲಾಗಿದೆ. ಕೆಲವರು ಇನ್‌ಫ್ಲುಯೆನ್ಸ್‌ನಿಂದ ಯಾವುದೋ ರೀತಿಯಲ್ಲಿ ಮನವಿಗಳನ್ನು ಸಲ್ಲಿಸಿ ಅವರ ವರ್ಗಗಳನ್ನು ಕ್ಯಾನ್ಸರ್ ಮಾಡಿಸಿಕೊಳ್ಳುತ್ತಾರೆ, ಆದ್ದರಿಂದ ಅಂತಹವರು ಬೇರೆ ಕಡೆಗೆ ಹೋಗುವುದಕ್ಕೆ ಅವಕಾಶ ಇರುವುದಿಲ್ಲ. ಕೊಪ್ಪದಲ್ಲಿ ಅದೇ ರೀತಿಯಲ್ಲಿ ನಡೆಯುತ್ತಿದೆ. ಮಲೆನಾಡಿನಿಂದ ಬಂದವರು ಅಲ್ಲಿಯೇ ಇರುತ್ತೇತೆಂದು ಹೇಳಿರುವಂತಹ ವಿದರ್ತನ ಇಡೆಯುಂದು ಕೇಳುತ್ತಾರೆ. ಬೇರೆ ಕಡೆಗೆ ಅವರು ಹೋಗುವುದಿಲ್ಲವೆಂಬ ಅನುಮಾನ ಇನ್ನೂ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿಯಾಗಿ ಮಾನ್ಯ ಸದಸ್ಯರು ಅಭಿಪ್ರಾಯ ಪಡುವುದಾದರೆ, ಡೈರೆಕ್ಟರ್ ಅವರಿಗೆ ಯಾರನ್ನೇ ಆಗಲೀ ಒಂದು ಸಾರಿ ಟ್ರಾನ್ಸ್‌ಫರ್ ಮಾಡಿದಮೇಲೆ ಮತ್ತೆ ಅದನ್ನು ಕ್ಯಾನ್ಸರ್ ಮಾಡಬೇಡಿ ಹಾಗೂ ಯಾರಾದರೂ ಬಂದು ಅದರ ಬಗ್ಗೆ ಕೇಳಿದರೂ ಅದಕ್ಕೆ ಮನ್ನಣೆ ಕೊಡಬೇಡಿ ಎಂಬುದಾಗಿ ಅವರಿಗೆ ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ,—ಕಳಸದಲ್ಲಿ ನಾಮಾರು 2 ವರ್ಷಗಳಿಂದ ಡಾಕ್ಟರ್ ಇಲ್ಲ. ಯಾರೋ ಒಬ್ಬರು ಬಂದು ಒಂದು ವರ್ಷವೂ ಆಗಿಲ್ಲ. ಅಂತಹವರನ್ನು ಹೇಳಿಕೆ ಕೇಳದೆ ನೀವು ಟ್ರಾನ್ಸ್‌ಫರ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೇನಾದರೂ ಇದ್ದರೆ ಅದಕ್ಕೇನೋ ಕಾರಣವಿರಬಹುದು. ಕಳಸದಲ್ಲಿ ಇರತಕ್ಕ ಆಸ್ಪತ್ರೆಗೆ ಡಾಕ್ಟರ್‌ಗಳು ಹೋಗುವುದೇ ಅಪರೂಪ. ಸಕಾರಣವಿಲ್ಲದೆ ಟ್ರಾನ್ಸ್‌ಫರ್ ಮಾಡುವುದಕ್ಕೆ ಆಗುವುದಿಲ್ಲ. ಅಂಥಾದ್ದು ಇದ್ದರೆ ವಿಚಾರ ಮಾಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ವಿಚಾರದಲ್ಲಿ ನಾನು ಕರೆಸ್‌ಪಾಂಡೆನ್ಸ್ ಮಾಡಿಲ್ಲವೇ? ನಾನು ಇದರ ಬಗ್ಗೆ ಕಾಗದ ಪತ್ರ ವ್ಯವಹಾರ ಮಾಡಿದ್ದರೂ ಕೂಡ ಅಲ್ಲಿದ್ದಂಥ ಡಾಕ್ಟರನ್ನು ಏನಾಕಾರಣ ವರ್ಗ ಮಾಡಿಸಿರುವುದರಿಂದ ಅವರು ಈಗ ರಾಜೀನಾಮೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ಧವೀರಪ್ಪ.—ಅದು ನನಗೆ ಗೊತ್ತಿಲ್ಲ. ಆ ರೀತಿ ಅನ್ಯಾಯವಾಗಿದ್ದರೆ either on punishment or whatever it is ಅವರು ರಾಜೀನಾಮೆ ಕೊಟ್ಟಿದ್ದರೆ, ಅವರು ಪುನಃ ಕೆಲಸಕ್ಕೆ ಬರುವುದಾದರೆ, ಅವರನ್ನು ತೆಗೆದುಕೊಳ್ಳುತ್ತೇವೆ.

Increase in the bed strength of T. B. Hospital, Tumkur

247. **Sri N. BASAVAIAH** (Chikkanayakanahalli)—

Will the Minister for Heatlh be pleased to state :—

(*a*) the number of beds, both for male and female patients, in the T. B. Hospital, Tumkur ;

(*b*) whether it has come to the notice of the Government that the present bed strength is not sufficient to admit the number of patients approching for admission to the Hospital as in-patients ;

(*c*) whether there is any proposal for increasing the bed strength in the above hospital ;

(*d*) if not, the reasons for the same ?

Sri H. SIDDAVEERAPPA (Minister for Health).—

(*a*) 30 beds (15 beds male and 15 female).

(*b*) No.

(*c*) No.

(d) Does not arise.

ಶ್ರೀ ಎನ್. ಬಸವಯ್ಯ.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ 50 ಹಾಸಿಗೆಗಳೆಂದು ಹೇಳಿ ಅದರಲ್ಲಿ 15 ಪುರುಷರ ಹಾಗೂ 15 ಮಹಿಳೆಯರ ಹಾಸಿಗೆಗಳು ಎಂದು ಹೇಳಿದೆ. ಅಂದಮೇಲೆ ಒಟ್ಟು 30 ಹಾಸಿಗೆಗಳು ಆಯಿತು. ಇನ್ನುಳಿದ 20 ಹಾಸಿಗೆಗಳು ಯಾರಿಗೆ ?

† ಶ್ರೀ ಎಚ್. ಸಿದ್ಧವೀರಪ್ಪ.—ಅಲ್ಲಿರುವುದು 30 ಹಾಸಿಗೆಗಳು. ಕನ್ನಡದಲ್ಲಿ ತಪ್ಪಾಗಿ ಪ್ರಿಂಟ್ ಆಗಿದೆ. ಕೆಲವು ನಂದರ್ಭಗಳಲ್ಲಿ ಪ್ರಿಂಟರ್ಸ್ ಡೆವಿಲ್ ಆಗುತ್ತದೆ.

ಅಧ್ಯಕ್ಷರು.—ಇಂಗ್ಲಿಷ್ ಕಾಪಿಯಲ್ಲಿ 30 ಹಾಸಿಗೆಗಳೆಂದು ಸರಿಯಾಗಿ ಪ್ರಿಂಟ್ ಆಗಿದೆ.

ಶ್ರೀ ಎನ್ ಬಸವಯ್ಯ.—ಜಿಲ್ಲಾ ಕೇಂದ್ರದ ಆಸ್ಪತ್ರೆಗೆ ಕೇವಲ 30 ಬೆಡ್‌ಗಳು ಸಾಕಾಗುವುದಿಲ್ಲ. ಇನ್ನೂ ಹೆಚ್ಚು ಬಹಳ ಜಾಗವಾಗಿ ಇರುತ್ತಾರೆ. ಆದ್ದರಿಂದ ಸಾಕಷ್ಟು ಬೆಡ್‌ಗಳು ಇಲ್ಲದೆ ಇದ್ದರೆ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಈಗಿರತಕ್ಕ ಸಂಖ್ಯೆಯನ್ನು ಹೆಚ್ಚಿಸುವುದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸುತ್ತಾರೆಯೇ ?

ಶ್ರೀ ಎಚ್. ಸಿದ್ಧವೀರಪ್ಪ.—ಅಲ್ಲಿ ಟಿ. ಬಿ. ಆಸ್ಪತ್ರೆ ಇಲ್ಲ. ಟಿ. ಬಿ. ವಾರ್ಡ್ ಮಾತ್ರ ಇದೆ. ಈಗ 15 ಬೆಡ್ಸ್ ಗಂಡಸರಿಗೆ, 15 ಬೆಡ್ಸ್ ಹೆಂಗಸರಿಗೆ ರಿಜರ್ವ್ ಆಗಿದೆ. ಅಲ್ಲಿ ಈಗ ಒಂದು ಡಿಸ್ಪೆನ್ಸರಿ ಟಿ. ಬಿ. ಸೆಂಟರ್ ಇದೆ. ಆ ವಿಚಾರ ಮಾನ್ಯ ಸದಸ್ಯರಿಗೂ ಗೊತ್ತಿದೆ. 1963 ನೇ ಇಸವಿಯಿಂದ ಅಷ್ಟರತಕ್ಕವರೇ ಎಲ್ಲಾ ಕಡೆಯೂ ಹೋಗಿ ಕೆಲಸ ಮಾಡುತ್ತಿದ್ದಾರೆ. ಇದೀ ಜಿಲ್ಲೆಯಲ್ಲಿ ಅಲ್ಲಿನವರು ಕೆಲಸ ಮಾಡುತ್ತಿದ್ದಾರೆ. ಈ ವರ್ಷ ನವೆಂಬರ್ ಗೆ ಇಡೀ ಸಂಸ್ಥಾನಕ್ಕೆ 50 ಬೆಡ್‌ಗಳನ್ನು ಮಾತ್ರ ಎಕ್ಸ್‌ಟ್ರಾ ಕೇಂದ್ರಸರ್ಕಾರದವರು ಮಂಜೂರು ಮಾಡಿಕೊಟ್ಟಿದ್ದಾರೆ. ನಮಗೆ ಹೆಚ್ಚಿನ ಅವಶ್ಯಕತೆಯೇನೋ ಇದೆ ಆದರೆ ಈಗ ಸೊತಕ್ಕೆ ಬೆಡ್‌ಗಳನ್ನು ಬಹಳ ಪ್ರಾಮುಖ್ಯವಾಗಿ ಅವಶ್ಯಕತೆ ಇರುವ ಕಡೆಗಳಿಗೆ ಹಂಚಬೇಕಾಗಿರುವುದರಿಂದ, ತುಮಕೂರಿನಲ್ಲಿ ಈಗ ಸದ್ಯಕ್ಕೆ ಬೆಡ್‌ಗಳನ್ನು ಈ ಆಸ್ಪತ್ರೆಯಲ್ಲಿ ಜಾಸ್ತಿ ಮಾಡುವುದಕ್ಕೆ ಅವಕಾಶವಿಲ್ಲ.